ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಉತ್ತಮವಾದಂತಹ ಸಲಹೆ ಕೊಟ್ಟಿದ್ದಾರೆ. ಅಂತಹ ಸಿಬ್ಬಂದಿಯ ಅಭಿಸ್ಥಿನ ಬಗ್ಗೆ ನಿರ್ದಿಷ್ಟ ಪ್ರಕರಣವನ್ನು ತಿಳಿಸಿದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕೂಡ ನಾವು ತಯ್ಯಾರಾಗಿದ್ದೇವೆ. ಇನ್ನು ಮುಂದೆ ಪ್ರವಾಸಿ ಮಂದಿರಕ್ಕೆ ಅತಿಥಿಗೃಹಗಳನ್ನು ಸುಸ್ಥಿತಿಯಲ್ಲಿ ಇಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಹೆಚ್ಚಿನ ಪ್ರವಾಸಿ ಮಂದಿರಗಳು, ಅತಿಥಿಗೃಹಗಳು, ನಿರೀಕ್ಷಣಾ ಮಂದಿರಗಳು ದುರಸ್ಥಿಯಾಗಬೇಕಾಗಿವೆ. ಇರುವಂತಹ ಪ್ರವಾಸಿ ಮಂದಿರ, ಅತಿಥಿ ಗೃಹಗಳು ಅಂದ ಚೆಂದ, ಓರಣ ಸಾರಣ ಕೆಲಸ ಚೆನ್ನಾಗಿಲ್ಲದೆ ಇರತಕ್ಕ ಮಂದಿರಗಳುಂಟು. ಆವುಗಳನ್ನು ಸರಿಯಾಗಿ ಇರುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ, ಒಳ್ಳೆಯ ಸಲಹೆ.

ವಿಭಾಗ ಕಾವಂಗಾರಿಗಾಗಿ ಗುಲ್ಬರ್ಗ ಜಿಲ್ಲೆಗೆ ಹಂಚಿಕೆಯಾದ ಮೊಬಲಗು

೬೫೦. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗ ಜಿಲ್ಲೆಯಲ್ಲಿಯು ಗಡಿ ಪ್ರದೇಶ ರಸ್ತೆಗಳಲ್ಲಿ ಅಭಿವೃದ್ಧಿಗಾಗಿ ನೀಡಲಾದ ರಸ್ತೆ ಮತ್ತು ಸೇತುವೆಗಳಡಿಯಲ್ಲಿ ನೀಡಲಾದ ಅನುದಾನ (ರಸ್ತೆ ಮತ್ತು ಸೇತುವೆಗಳ ಹೆಸರುಗಳ ವಿವರ ಗಳನ್ನು ಒದಗಿಸುವುದು),

ಆ) ಈ ಗಡಿ ಪ್ರದೇಶ ರಸ್ತೆಗಳ ಮೇಲೆ ಮಾಡಲಾದ ಒಟ್ಟು ವೆಚ್ಚ,

ಇ) ಗಡಿ ಪ್ರದೇಶದ ರಸ್ತೆ ಮತ್ತು ಸೇತುವೆಗಳನ್ನು ಆಯ್ಕೆ ಮಾಡಲು ಅಂಗೀಕರಿಸಿದ ಸೂತ್ರಗಳು

ಶ್ರೀ ಜಿ. ಪುಟ್ಟಸ್ವಾಮಿ ಗೌಡ, (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿ ಯವರು).—

ಅ) ಗುಲಬರ್ಗ ಜಿಲ್ಲೆಯಲ್ಲಿಯು ಗಡಿ ಪ್ರದೇಶ ರಸ್ತೆಗಳ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ಯಾವುದೇ ಅನುದಾನವನ್ನು ರಾಜ್ಯ ಆಯವ್ಯಯದಲ್ಲಿ ನೀಡಿರುವುದಿಲ್ಲ. ಆದರೆ ಹೈದಾರಬಾದ್ ಕರ್ನಾಟಕ ಅಭಿವೃದ್ಧಿಯಡಿಯಲ್ಲಿ ಕೆಳಕಂಡ ಗಡಿ ಪ್ರದೇಶದ ರಸ್ತೆಗಳನ್ನು ೧೯೯೦–೯೧ರ ಸಾಲಿನಲ್ಲಿ ತೆಗೆದು ಕೊಳ್ಳಲಾಗುವುದು.

ರಸ್ತೆ ಹೆಸರು	ಒಟ್ಟು ಅಂದಾಜು ಲಕ್ಷ ರೂ. ಗಳು	ಪ್ರಸ್ತಾಪಿಸಲಾದ ೯೦–೯೧ರಲ್ಲಿ ಅನುದಾನದ ಲಕ್ಷ ರೂ. ಗಳು
೧) ಗುಲ್ಬರ್ಗ ಸೇಡಂ ರಾವಳಪಲ್ಲಿ ರಸ್ತೆ ೮೨ ಕಿ. ಮೀ	೪೩೫–೦೦	೯೨–೫೦
೨) ಸೇಡಂ ಗುರುಮಿಟಕಲ್ ರಸ್ತೆ ೫೦ ಕಿ. ಮೀ	೨೭೦–೦೦	೨೯–೦೦
೩) ಚಿಂಚೋಳಿ–ಕಾಂಡೂರ ರಸ್ತೆ ೧೬ ಕಿ. ಮೀ	೯೬–೦೦	೧೪–೦೦

ಆ) ಈ ಅನುದಾನದಡಿಯಲ್ಲಿ ಯಾವುದೇ ಕಾವಂಗಾರಿಗಳನ್ನು ಇನ್ನೂ ಕೈಕೊಂಡಿಲ್ಲವಾದ್ದರಿಂದ ವೆಚ್ಚ ಇಲ್ಲಾ.

ಇ) ಯಾವುದೇ ಸೂತ್ರಗಳನ್ನು ನಿಗದಿಪಡಿಸಿಲ್ಲ. ಕರ್ನಾಟಕ ರಾಜ್ಯದ ಗಡಿ ಪ್ರದೇಶದಿಂದ ಪಕ್ಕದ ರಾಜ್ಯಗಳಿಗೆ ಸಂಪರ್ಕವಿರುವ ರಸ್ತೆಗಳನ್ನು ಗಡಿ ರಸ್ತೆಗಳೆಂದು ಪರಿಗಣಿಸಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರವನ್ನು ಓದಗಿಸಿದ್ದಾರೆ. ಬಾರ್ಡರ್ ಏರಿಯಾದಲ್ಲಿ ಹೊಸದಾಗಿ ರಸ್ತೆಗಳನ್ನು ಮಾಡುವುದಕ್ಕಾಗಲೀ ಅಥವಾ ರಿಪೇರಿ ಮಾಡುವುದಕ್ಕಾಗಲೀ, ಇಂಪ್ರೂವ್‌ಮೆಂಟ್ ಮಾಡುವುದಕ್ಕಾಗಲೀ ಇರುವ ನಾಮ್ಸ್ ಏನಂ?

ಎಷ್ಟು ಕಿಲೋಮೀಟರ್ ಉದ್ದದ ಬಾರ್ಡರ್ ರಸ್ತೆ ಕರ್ನಾಟಕದಲ್ಲಿದೆ? ಅದಕ್ಕೆ ಕಳೆದ ಸಲ ಎಷ್ಟು ಹಣವನ್ನು ಖರ್ಚು ಮಾಡಿದ್ದಿರಿ? ಈ ವರ್ಷ ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ನಿಗದಿ ಮಾಡಿದ್ದಿರಿ ಎನ್ನುವುದನ್ನು ಹೇಳಬೇಕು. ಎರಡನೆಯದಾಗಿ, ಯಾದಗಿರಿ ತಾಲ್ಲೂಕಿನಲ್ಲಿ ಯಾದಗಿರಿ–ಹೈದರಾಬಾದ್ ಅಂದರೆ ಯಾದಗಿರಿ ಕೊಡೇಂಗಲ್ ರಸ್ತೆ ಆ ಮೇಲೆ ನಾರಾಯಣಪೇಟೆ–ಸೈದಾಪುರ ಎಂತ್ತು ಗುಂಜನೂರು ನಾರಾಯಣಪೇಟೆ, ಮೆಹಬೂಬ್‌ನಗರ ಡಿಸ್ಟ್ರಿಕ್ಟ್‌ಗೆ ಹತ್ತಿರದಲ್ಲಿರತಕ್ಕ ರಸ್ತೆಗಳಿಗೆ ತಾವು ಹಣವನ್ನು ಒದಗಿಸದೇ ಇರುವುದಕ್ಕೆ ಕಾರಣವೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕರ್ನಾಟಕ ಗಡಿ ಪ್ರದೇಶದಲ್ಲಿ ಎಷ್ಟು ಉದ್ದದ ರಸ್ತೆಯಿದೆ ಎಂದು ಪ್ರಶ್ನೆ ಹಾಕಿದ್ದಾರೆ. ಬಹುಶಃ ಆ ವಿವರ ನನ್ನ ಹತ್ತಿರ ಇಲ್ಲ. ಗುಲ್ಬರ್ಗ ಜಿಲ್ಲೆಯಲ್ಲಿ ಗಡಿ ಪ್ರದೇಶದ ರಸ್ತೆಗಳಿಗೆ ಅವುಗಳ ಅಭಿವೃದ್ಧಿಗಾಗಿ ನೀಡಿರತಕ್ಕ ಹಣ ಎಷ್ಟು ಎನ್ನುವ ವಿವರವನ್ನು ತರಿಸಿಕೊಡುತ್ತೇನೆ. ಈಗ ಗುಲ್ಬರ್ಗ ಜಿಲ್ಲೆಯಲ್ಲಿ ನಾವು ಆಯವ್ಯಯದಲ್ಲಿ ಯಾವುದೇ ರಸ್ತೆ ದುರಸ್ತಿ ಕಾರ್ಯಕ್ಕೆ ಅನುದಾನವನ್ನು ಮೀಸಲಾಗಿಟ್ಟಿಲ್ಲ. ಆದರೆ ಹೈದರಾಬಾದ್, ಕರ್ನಾಟಕ ಅಭಿವೃದ್ಧಿ ಮಂಡಳಿ ವತಿಯಿಂದ ಕೆಲವೊಂದು ರಸ್ತೆಗಳನ್ನು ತೆಗೆದುಕೊಳ್ಳತಕ್ಕ ಪ್ರಸ್ತಾಪೆ ಇಟ್ಟು ಕೊಂಡಿದ್ದೇವೆ. ಶೀಘ್ರದಲ್ಲಿ ನಾವು ಮಂಜೂರಾತಿ ಮಾಡುವ ಮೂಲಕ ಅವುಗಳನ್ನು ತೆಗೆದುಕೊಳ್ಳುತ್ತೇವೆ. ಆ ವಿವರಗಳನ್ನು ನಾನು ಈಗಾಗಲೇ ಒದಗಿಸಿದ್ದೇನೆ. ಸೇಡಂ–ರಾವಲಪಂಡಿ ರಸ್ತೆ ೮೨ ಕಿಲೋಮೀಟರ್ ಉದ್ದವಿದ್ದು ಅದಕ್ಕೆ ೧೩೫ ಲಕ್ಷ ರೂಪಾಯಿಗಳನ್ನು ಅಂದಾಜು ಮಾಡಲಾಗಿದೆ. ಅದಕ್ಕೆ ನಾವು ಪ್ರಪೋಸ್ ಮಾಡಿರತಕ್ಕದ್ದು ೯೫ ಲಕ್ಷ. ಸೇಡಂ–ಗುರಮಿಠಕಲ್ ರಸ್ತೆ ೫೦ ಕಿಲೋಮೀಟರ್ ಉದ್ದವಿದ್ದು ಅದಕ್ಕೆ ೨೭೦ ಲಕ್ಷ ಬೇಕಾಗುತ್ತದೆಂದು ಅಂದಾಜು ಮಾಡಿದ್ದೇವೆ. ಈ ಸಾರಿ ೨೯ ಲಕ್ಷ ರೂಪಾಯಿಗಳನ್ನು ಹೆಡ್‌ನಲ್ಲಿ ಕೊಡಬೇಕೆಂಬ ಪ್ರಸ್ತಾವವನ್ನು ಸಭೆಯ ಮುಂದಿಟ್ಟಿದ್ದೇವೆ, ಚಿಂಚೋಳಿ ಕಾಡನೂರು ರಸ್ತೆ ೧೬ ಕಿಲೋಮೀಟರ್ ಉದ್ದವಿದ್ದು, ಅದಕ್ಕೆ ೯೬ ಲಕ್ಷ ರೂಪಾಯಿ ಬೇಕಾಗುತ್ತದೆಂದು ಅಂದಾಜು ಮಾಡಲಾಗಿದೆ. ೧೪ ಲಕ್ಷ ರೂಪಾಯಿಗಳನ್ನು ಪ್ರಪೋಸ್ ಮಾಡಿದ್ದೇವೆ. ಇದು ಸರ್ಕಾರದ ಮಂಜೂರಾತಿಗಾಗಿ ತೀವ್ರ ಪರಿಶೀಲನೆಯಲ್ಲಿದೆ. ಬಹುಶಃ ಈ ವಾರದಲ್ಲಿ ಮಂಜೂರಾತಿ ಸಿಕ್ಕಿ ಕೆಲಸವನ್ನು ತೆಗೆದುಕೊಳ್ಳತಕ್ಕ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನಿಂದ ಇದಕ್ಕೆ ಫಂಡನ್ನು ಒದಗಿಸುತ್ತೇವೆ ಎಂದು ಹೇಳಿದರು ಈಗಾಗಲೇ ಬಾರ್ಡರ್ ರೋಡ್ಸ್‌ಗಾಗಿ ಐದು ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ ಪ್ರಾವಿಜನ್ ಮಾಡಿದ್ದಾರೆ ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಫಂಡ್ ಅಲ್ಲದೆ ನಾರ್ಮಲ್ ಫಂಡ್‌ನಲ್ಲಿ ಬಾರ್ಡರ್ ಏರಿಯಾಕ್ಕಾಗಿ ೫ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿದ್ದಾರೆ, ಇದು ರಾಜ್ಯಪಾಲರ ಭಾಷಣದಲ್ಲಿದೆ. ಅದಕ್ಕಾಗಿ ನಾನು ಕೇಳತಕ್ಕದ್ದು ಇಷ್ಟೆ ಈ ನಾರಾಯಣಪೇಟೆಯಿಂದ ಸೈದಾಪುರ ಮತ್ತು ಹುಂಜನೂರಿನಿಂದ ನಾರಾಯಣಪೇಟೆ ಇವು ಅತ್ಯಂತ ಅವಶ್ಯಕವಾದಂಥ ರಸ್ತೆಗಳು ಆಲ್ಲಿ ನಮ್ಮ ರಸ್ತೆ ಮುಗಿದಮೇಲೆ ನೀವು ಆಂಧ್ರದಲ್ಲಿ ನೋಡಬೇಕು. ಆಲ್ಲಿ ಸುಮಾರು ಡಬ್ಬಲ್ ರೋಡ್‌ಗಳು ಇವೆ ನಮ್ಮ ರಾಜ್ಯದ ಒಳಗಡೆ ಬಂದರೆ, ರಸ್ತೆ ಪರಿಸ್ಥಿತಿ ನೋಡಿದರೆ ಕರ್ನಾಟಕ ಬಂತೆಂದು ಎನ್ನುವ ಹಾಗೆ ಆಗುತ್ತದೆ. ಬಾರ್ಡರ್ ಏರಿಯಾದಲ್ಲಿ ಬೋರ್ಡ್ ಇಲ್ಲದಿದ್ದರೂ ಸಹ ಆಂಧ್ರದಿಂದ ನಮ್ಮ ಭಾಗದ ಒಳಗೆ ಪ್ರವೇಶ ಮಾಡಿದರೆ, ಈ ರಸ್ತೆಗಳನ್ನು ನೋಡಿದ ಕೂಡಲೇ ಕರ್ನಾಟಕ ಬಾರ್ಡರ್‌ಗೆ ಬಂದಿದ್ದೇವೆ ಎಂದು ಗೊತ್ತಾಗುತ್ತದೆ: ಯಾರೂ ಹೇಳಬೇಕಾಗಿಲ್ಲ ಬೋರ್ಡ್ ಕೂಡ ಬೇಕಾಗಿಲ್ಲ. ಆದ್ದರಿಂದ ದಯವಿಟ್ಟು ಈ ಎರಡೂ ರಸ್ತೆಗಳನ್ನು ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಫಂಡ್‌ನಲ್ಲಿ ತೆಗೆದುಕೊಳ್ಳುತ್ತೀರಾ ಹೇಗೆ? ಹೈದರಾಬಾದ್ ಕರ್ನಾಟಕ ಏರಿಯಾದ್ದು ನಾನು ಕೇಳುತ್ತಿಲ್ಲ. ನಾರ್ಮಲ್ ಫಂಡ್ಸ್‌ನಲ್ಲಿಯೇ ತೆಗೆದುಕೊಳ್ಳಿ. ಇದಕ್ಕೆ ಪ್ರಾವಿಜನ್ ಇದೆ ದಯವಿಟ್ಟು ಇವೆರಡನ್ನೂ ಕೂಡ ಆದರಲ್ಲಿ ಸೇರಿಸುತ್ತೀರಾ ಹೇಗೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧ್ಯಕ್ಷರೇ, ಬಾರ್ಡರ್ ಏರಿಯಾ ಡೆವೆಲಪ್‌ಮೆಂಟ್ ಸ್ಕೀಮ್‌ನಲ್ಲಿ ೫ ಕೋಟಿ ರೂಪಾಯಿ ಹಣ ಕೊಟ್ಟಿದ್ದುದು ನಿಜ. ಆದರೆ ಯಾವ ರಸ್ತೆಗೆ ಎಷ್ಟು ಕೊಡಬೇಕು ಎಂಬುದು ಇನ್ನೂ ನಿಶ್ಚಿತವಾಗಿಲ್ಲ. ಮಾನ್ಯ ಸದಸ್ಯರು ಹೇಳಿರತಕ್ಕ ರಸ್ತೆಗಳನ್ನು ಆ ಸಂದರ್ಭದಲ್ಲಿ ಗಮನದಲ್ಲಿಟ್ಟು ಕೊಂಡು ನಾವು ಸೇರಿಸಂವ ಪ್ರಯತ್ನ ಮಾಡುತ್ತೇವೆ.